# ಮಾನ್ಯ ಜಿಲ್ಲಾಧಿಕಾರಿಗಳವರ ನ್ಯಾಯಾಲಯ , ತುಮಕೂರು ಜಿಲ್ಲೆ, ತುಮಕೂರು

**ಪ್ರಕರಣ ಸಂಖ್ಯೆ : ಪಿ.ಟಿ.ಸಿ.ಎಲ್ 04/08-09**

| **ವಾದಿಗಳು/ಮೇಲ್ಮನವಿದಾರರು** | **ವಿ** | **ಎದುರುದಾರರು/ಪ್ರತಿವಾದಿಗಳು** |
|---|---|---|
| **ಎಂ.ಗಂಗಯ್ಯ ಬಿನ್ ಲೇಟ್ ಮಾರಯ್ಯ ಇನ್ನೊಬ್ಬರು** | | **ಉಪವಿಭಾಗಾದಿಕಾರಿಗಳು ಮತ್ತು ಇನ್ನಿಬ್ಬರು** |

**ವಾದಿಗಳ ಪರವಾಗಿ ಸಲ್ಲಿಸುತ್ತಿರುವ ಲಿಖಿತ ಕಾನೂನು ವಾದ ಪತ್ರ:-**

1. ಬೆಂಗಳುರು ಜಿಲ್ಲೆ, ಬೆಂಗಳುರು ತಾಲೂಕಿನ ಬಾಣಸವಾಡಿ ಗ್ರಾಮದ ವಾಸಿಗಳಾದ ಶ್ರೀ ಗಂಗಯ್ಯ ಬಿನ್ ಲೇಟ್ ಮಾರಯ್ಯ ರವರು ಕಲಂ 5(ಎ) ಕರ್ನಾಟಕ ಎಸ್.ಸಿ. ಎಸ್.ಟಿ (ಪಿ.ಟಿ.ಸಿ.ಎಲ್) ಕಾಯ್ದೆ ಅಡಿಯಲ್ಲಿ ಸಲ್ಲಿಸಿರುವ ಮೇಲ್ಮನವಿ ಇದಾಗಿರುತ್ತದೆ. ಮೇಲ್ಮನವಿಯ ಮೆಮೋದಲ್ಲಿ ಸಲ್ಲಿಸಿರುವ ಕಾರಣಗಳನ್ನು ಈ ವಾದ ಪತ್ರದೊಂದಿಗೆ ಓದಿ ಕೊಳ್ಳಲು ಕೋರುತ್ತೇನೆ. ಈ ವಾದಪತ್ರವನ್ನು ವಾದಿಗಳ ಪರವಾಗಿ ರಚಿಸಿದವರು ಶ್ರೀಧರಬಾಬು. ಎನ್. ವಕೀಲರು ತುಮಕೂರು.

2. ಕಲಂ 5(ಎ) ಅಡಿಯಲ್ಲಿ ಪ್ರಶ್ನಿತ ಆದೇಶದ ವಿವರ:- ದಿನಾಂಕ 23-06-2008 ರಲ್ಲಿ 1ನೇ ಪ್ರತಿವಾದಿಗಳವರು ಕಲಂ 5 ಕರ್ನಾಟಕ ಎಸ್.ಸಿ. ಎಸ್.ಟಿ (ಪಿ.ಟಿ.ಸಿ.ಎಲ್) ಕಾಯ್ದೆ ಅಡಿಯಲ್ಲಿ ಆದೇಶವನ್ನು ಹೊರಡಿಸಿ ತುಮಕೂರು ಜಿಲ್ಲೆ, ಗುಬ್ಬಿ ತಾಲೂಕು, ಕಸಬಾ ಹೋಬಳಿ, ಸುರಿಗೇನಹಳ್ಳಿ ಕಾವಲ್ ಸರ್ವೆ ನಂ. 72 ರಲ್ಲಿ (ಹೊಸ ನಂ. 288) ಒಟ್ಟು 2.20 ಅಳತೆಯಲ್ಲಿ 0.02 ಗುಂಟೆ ಖರಾಬು ಜಾತಾ 2 ಎಕರೆ 18 ಗುಂಟೆ ಜಮೀನು ಪಿ.ಟಿ.ಸಿ.ಎಲ್ ಕಾಯ್ದೆಗೆ ಒಳಪಡಿಸಿ ದಿನಾಂಕ 22-07-1988, ದಿನಾಂಕ 28-09-1995, ದಿನಾಂಕ 09-09-1996 ರವರೆಗೆ ನಡೆದಿರುವ ಪರಭಾರೆ ಕ್ರಯಪತ್ರಗಳನ್ನು ಅಸಿಂದು ಎಂದು ಘೋಷಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಿದ ಮೇಲ್ಮನವಿ ಇದಾಗಿರುತ್ತದೆ.

3. ತುಮಕೂರು ಜಿಲ್ಲೆ, ಗುಬ್ಬಿ ತಾಲೂಕು, ಕಸಬಾ ಹೋಬಳಿ, ಸುರಿಗೇನಹಳ್ಳಿ ಕಾವಲ್ ಸರ್ವೆ ನಂ. 72 ರಲ್ಲಿ (ಹೊಸ ನಂ. 288) ಒಟ್ಟು 2.20 ಅಳತೆಯಲ್ಲಿ 0.02 ಗುಂಟೆ ಖರಾಬು ಜಾತಾ 2 ಎಕರೆ 18 ಗುಂಟೆ ಜಮೀನು 09-08-1976 ರಲ್ಲಿ ನಡೆದ ಹರಾಜಿನಂತೆ ದಿನಾಂಕ 26-11-1976 ರಲ್ಲಿ ಎಲ್.ಎನ್.ಡಿ. ಎಸ್.ಆರ್. 45/75-76 ರಂತೆ ನಮೂನೆ 1 ಮತ್ತು ಲ್ಯಾಂಡ್ ರೆವಿನ್ಯೂ ನಿಬಂದನೆಗಳ 'ಇ' ಪರಿಶಿಷ್ಟ ದಂತೆ, ಮಾನ್ಯ ತಹಸೀಲ್ದಾರರು

ಗುಬ್ಬಿ ತಾಲೂಕು ರವರು ಲ್ಯಾಂಡ್ ರೆವಿನ್ಯೂ ನಿಯಮ 43–ಸಿ, 48, 54, 56 ರಂತೆ ಜಮೀನು ಸಾರ್ವಜನಿಕ ಹರಾಜಾಗಿರುತ್ತದೆ.

4. ಸದರಿ ಜಮೀನಿನಲ್ಲಿ ಚಿಕ್ಕರಂಗಯ್ಯ ಬಿನ್ ನಡುಕೇರಯ್ಯ ಎಂಬುವವರು ಹರಾಜಿನಲ್ಲಿ ಕೊಂಡುಕೊಂಡಿರುತ್ತಾರೆ. ಸದರಿ ಹರಾಜಿನಲ್ಲಿ ಕೊಂಡುಕೊಂಡಿರುವ ಬಗ್ಗೆ ನಮೂನೆ –1 'ಇ' ಪರಿಶಿಷ್ಟ ಸಾಕ್ಷಿಯಾಗಿರುತ್ತದೆ. ಹರಾಜಿನ ಕಿಮ್ಮತ್ತು ಕಟ್ಟಿರುವ ಇರಸಾಲ್ ಪಟ್ಟಿ ಖಡತದಲ್ಲಿ ಲಭ್ಯವಿರುತ್ತದೆ. ಹರಾಜಿನಲ್ಲಿ ಹರಾಜಿನ ಕಿಮ್ಮತ್ತು ಹಣಪಾವತಿ ಮಾಡಿಕೊಂಡುಕೊಂಡಿರುವ ಬಗ್ಗೆ ದಾಖಲಾತಿಗಳಲ್ಲಿ ಉಲ್ಲೇಖವಿದೆ.

5. ಚಿಕ್ಕರಂಗಯ್ಯ ಬಿನ್ ನಡುಕೇರಯ್ಯ ಸದರಿ ಭೂ ಮಂಜೂರಾತಿಯನ್ನು ಪಡೆದಿದ್ದರೆ ಲ್ಯಾಂಡ್ ರೆವಿನ್ಯೂ ನಿಯಮ 43(4) ನಿಯಮದಂತೆ ನಮೂನೆ 1 ಮತ್ತು 2 ಪರಿಶಿಷ್ಟ ಡಿ ಅಡಿಯಲ್ಲಿ ಚಿಕ್ಕರಂಗಯ್ಯ ಬಿನ್ ನಡುಕೇರಯ್ಯ ಎಂಬುವವರ ಹೆಸರು ವಹಿಯಲ್ಲಿ ನಮೂದಿರಬೇಕಿರುತ್ತದೆ. ಅಂತಹ ವಿವರ ಇಲ್ಲದೆ ಕೇವಲ ಆರ್.ಟಿ.ಸಿ ನಮೂದಿನ ಆದಾರದಲ್ಲಿ ಕೆಳ ನ್ಯಾಯಾಲಯ ತೀರ್ಮಾನಕ್ಕೆ ಬಂದಿರುವುದು ಕಾನೂನು ಬಾಹಿರವಾಗಿರುತ್ತದೆ.

6. ಸದರಿ ಪ್ರಶ್ನಿತ ಆದೇಶದಲ್ಲಿ ಚಿಕ್ಕರಂಗಯ್ಯ ಬಿನ್ ನಡುಕೇರಯ್ಯ ರವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜಾತಿ ಆದಾರದಲ್ಲಿ ಮಂಜೂರಾತಿ ಪಡೆದಿದ್ದಲ್ಲಿ ಮತ್ತು ಉಚಿತವಾಗಿ ಪಡೆದಿದ್ದಲ್ಲಿ ಈ ಬಗ್ಗೆ ಲ್ಯಾಂಡ್ ಗ್ರಾಂಟ್ ಸರ್ಟಿಫಿಕೇಟಿನಲ್ಲಿ ನಮೂದಿರಬೇಕಿರುತ್ತದೆ. ಅಂತಹ ನಮೂದು ಇರುವುದಿಲ್ಲ. ಲ್ಯಾಂಡ್ ರೆವಿನ್ಯೂ ನಿಯಮ ದ ನಮೂನೆ –1 'ಇ' ಪರಿಶಿಷ್ಟದ ಅನುಸಾರ ಕಿಮ್ಮತ್ತಿಗೆ ಹರಾಜಿನಲ್ಲಿ ಖರೀದಿಸಿದ ಗ್ರಾಂಟ್ ದಾಖಲಾತಿ ಇರುವುದರಿಂದ, 1888 ರ ಲ್ಯಾಂಡ್ ರೆವಿನ್ಯೂ ಕೆಲವು ನಿಯಮ ಮತ್ತು ಕಾಯ್ದೆ ಏನು ಹೇಳುತ್ತದೆ ಎಂದು ನೋಡಬೇಕಿರುತ್ತದೆ.

7. ನಿಯಮ 43 ಸಿ (4) ರ ಪ್ರಕಾರ ಸಾಮಾನ್ಯ ಭೂ ಮಂಜೂರಾತಿ ನಿಯಮ ಹೇಳಲಾಗಿದೆ Ordinary grants of lands. (4) As a rule land shall be granted on payment of occupancy price In special cases where the land is very valuable or where there is no demand for the land from persons eligible for the grant under Rule 43- C (l) and (2), the Deputy Commissioner, or other Officer authorised by him in this behalf, may sell such land by public auction.

8. ನಿಯಮ 56 ರ ಪ್ರಕಾರ ಭೂಮಿಯಲ್ಲಿ ಸ್ವಾಧೀನತೆಗೆ ಬರಲು ಸಕ್ಷಮ ಅಧಿಕಾರಿಯ ಅನುಮತಿ ಪತ್ರ ಪಡೆಯಬೇಕಿರುತ್ತದೆ. ಸದರಿ ಅನುಮತಿ ಪತ್ರ ನೀಡುವ ಅಧಿಕಾರಿಯು ನಿಯಮ 43ಜಿ (4) ಅಡಿಯಲ್ಲಿ ಉಚಿತವಾಗಿ ಗ್ರಾಂಟ್ ಮಾಡಿದ್ದರೆ ಮಾತ್ರ ಷರಾತ್ತು ವಿದಿಸಬಹುದಿರುತ್ತದೆ, ನಿಯಮ ಮೀರಿ ಷರತ್ತು ವಿದಿಸುವುದು ಕಾನೂನು ಬಾಹಿರವಾಗುತ್ತದೆ.

9. ಗಮನಿಸಬೇಕಾದ ಅಂಶವೇನೆಂದರೆ ದಿನಾಂಕ 26–11–1976 ರಲ್ಲಿ ಬಹಿರಂಗ ಹರಾಜಿನಲ್ಲಿ ಗ್ರಾಂಟ್ ಆಗಿರುತ್ತದೆ ಎಂದು ಸದರಿ ಪತ್ರ ಹೇಳಿತ್ತದೆ. ಆ ತಾರೀಖಿನಲ್ಲಿ 1888 ರ ಲ್ಯಾಂಡ್ ರೆವಿನ್ಯೂ ನಿಯಮದಂತೆ ಭೂ ಮಂಜೂರಾತಿ ಮಾಡಲು ಇಲಾಖೆ ಮುಂದಾಗಿದೆ. ದಿನಾಂಕ 06–11–1969 ರಿಂದ ಜಾರಿಯಾಗುವಂತೆ ಕರ್ನಾಟಕ ಲ್ಯಾಂಡ್ ಗ್ರಾಂಟ್ ನಿಯಮಗಳು 1969 ಜಾರಿಯಾಗಿರುತ್ತದೆ. ಕರ್ನಾಟಕ ಲ್ಯಾಂಡ್ ರೆವಿನ್ಯೂ ಕಾಯ್ದೆ 1964 ಕಲಂ 202 ಷೆಡ್ಯೂಲ್ ನಲ್ಲಿ ನಮೂದಿರುವ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ 1888 ದಿನಾಂಕ 19–03–1964 ರಿಂದ ಯಾವ ನಿಯಮ ಹೊಸದಾಗಿ ರಚಿತವಾಗಿದೆಯೋ ಅದಕ್ಕೆ ವಿರುದ್ದವಾಗಿ ಇರುವ ಹಳೆಯ ಕಾನೂನು ರದ್ದಾಗಿರುತ್ತದೆ. ಹಾಗೆಯೇ ಕರ್ನಾಟಕ ಲ್ಯಾಂಡ್ ರೆವಿನ್ಯೂ ನಿಯಮಗಳು 1966 ನಿಯಮ 151 ರಂತೆ ದಿನಾಂಕ 10–03–1966 ರಿಂದ ಮೈಸೂರು ಲ್ಯಾಂಡ್ ರೆವಿನ್ಯೂ ನಿಯಮಗಳು 1888 ಯಾವ ನಿಯಮ ಹೊಸದಾಗಿ ರಚಿತವಾಗಿದೆಯೋ ಅದಕ್ಕೆ ವಿರುದ್ದವಾಗಿ ಇರುವ ಹಳೆಯ ಕಾನೂನು ರದ್ದಾಗಿರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ಹೊಸ ಕಾಯ್ದೆ ಕಾನೂನಿನ ಅಡಿಯಲ್ಲಿ ಕಿಮ್ಮತ್ತಿಗೆ ಹರಾಜು ಮುಖೇನ ಹಂಚಿಕೆಯಾಗಿರುವ ಜಮೀನು ಯಾವ ರೀತಿ ನೀಡಬೇಕು ಎಂಬ ಬಗ್ಗೆ ನಿಯಮ ಇಲ್ಲದ ಪ್ರಯುಕ್ತ ಹಳೆಯ ನಿಯಮದಲ್ಲಿಯೇ ಹಂಚಿಕೆಯಾಗಿರುತ್ತದೆ. ಆದ್ದರಿಂದ ಇಲಾಖೆಯಲ್ಲಿ ಈ ಬಗ್ಗೆ ಗ್ರಾಂಟ್ ರಿಜಿಸ್ಟರ್ ಇಲ್ಲದಿರುವುದು ಗಮನಿಸಬಹುದಾಗಿರುತ್ತದೆ.

10. ದಿನಾಂಕ 26–11–1976 ರಲ್ಲಿ ಗ್ರಾಂಟ್ ಆಗಿರುವ ಜಮೀನುಗಳಿಗೆ ಅನುಸರಿಸಬೇಕಾದ ನಿಯಮ ವೇನೆಂದರೆ ನಮೂನೆ –7 ಕರ್ನಾಟಕ ಲ್ಯಾಂಡ್ ಗ್ರಾಂಟ್ ರೂಲ್ಸ್ 1969 ನಿಯಮ

29 ರ ಅಡಿಯಲ್ಲಿ ಗ್ರಾಂಟ್ ಸರ್ಟಿಫಿಕೇಟ್ ನೀಡಬೇಕಿರುತ್ತದೆ. ಆದರೆ ಸದರಿ ಕೇಸಿನಲ್ಲಿ ಸರ್ಕಾರಿ ಅಧಿಕಾರಿಯವರು ನಿಯಮ ಪಾಲನೆ ಮಾಡಿಲ್ಲವೆ? ಎಂಬ ಪ್ರಶ್ನೆ ಮೂಡುತ್ತದೆ, ಇಂದಿನ ಅಧಿಕಾರ ವರ್ಗಕ್ಕಿಂತ ಅಂದಿನ ಅಧಿಕಾರ ವರ್ಗ ಸ್ವಲ್ಪವಾದರೂ ಭಯಬೀತರಾಗಿ ಕೆಲಸ ನಿರ್ವಹಿಸುತ್ತಿದ್ದುದ್ದು ಚರಿತ್ರೆ ಒಂದೆಡೆಯಾದರೆ, ಇನ್ನೊಂದೆಡೆ, ಹೊಸಕಾನೂನಿನಲ್ಲಿ ಜಾರಿಯಲ್ಲಿಲ್ಲದ ನಿಯಮಕ್ಕೆ ಹಳೇ ಕಾನೂನಿನ ನಿಯಮವನ್ನು ಸಮರ್ಪಕವಾಗಿ ಜೆನರಲ್ ಕ್ಲಾಸಸ್ ಕಾಯ್ದೆ ನಿಯಮದಂತೆ ಅಂದು ಪರಿಪಾಲಿಸಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಹಳೇ ನಮೂನೆ ಮತ್ತು ಆಕಸ್ಮಿಕ ಷರತ್ತುಗಳನ್ನು ವಿದಿಸಿ ಬಹಿರಂಗ ಹರಾಜಿನಲ್ಲಿ ಜಮೀನು ಖರೀದಿಸಿದ್ದಾರೆ ಎಂದು ಪ್ರತಿನಿದಿಸಿರುವುದರಿಂದ, ಮತ್ತು ಬಹಿರಂಗ ಹರಾಜು ಪ್ರಕ್ರಿಯೆ ಅಡಿಯಲ್ಲಿ ಷರತ್ತು ವಿದಿಸಲು ಬರದೆ ಇರುವ ಕಾರಣಕ್ಕೆ ಪ್ರಶ್ನಿತ ಭೂ ಬಹಿರಂಗ ಹರಾಜು ಪ್ರಕ್ರಿಯೆ, ಮಂಜೂರಾತಿ ಪ್ರಕ್ರಿಯೆ ಎಂದು ತಿಳಿದು ಬರುತ್ತದೆ ಯಾದರೂ, ಅಂದಿಗೆ ಕಾನೂನು ಬದ್ದವಾದ ಬಹಿರಂಗ ಹರಾಜು ನಡೆದಿದೆ. ಸದರಿ ಬಹಿರಂಗ ಹರಾಜು ಮುಖೇನ ಖರೀದಿಸಿರುವ ಕಿಮ್ಮತ್ತು ನೀಡಿದ ಜಮೀನಿಗೆ ಷರತ್ತು ಅನ್ವಯಿಸುವುದಿಲ್ಲ ಎಂಬ ಸಾಮಾನ್ಯ ಕಾನೂನು ಜ್ಞಾನದಂತೆ ತಿಳಿದು ಮುಂದಾಗಿರುವ ಖರೀದಿದಾರರ ಪ್ರಶ್ನಿತ ಜಮೀನಿಗೆ ಪಿ.ಟಿ.ಸಿ.ಎಲ್ ಕಾಯ್ದೆ ಅನ್ವಯಿಸುವುದಿಲ್ಲ ಎಂಬುದು ಕಾನೂನು ಬದ್ದ ವಾದವಾಗಿರುತ್ತದೆ.

11. ಹಿಂದೆ ಇದ್ದ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡ್ 1888 ಮತ್ತು 1964 ರ ನಂತರ ಜಾರಿಯಾದ ನಿಯಮಗಳಂತೆ ದರ್ಖಾಸ್ತು ರಿಜಿಸ್ಟರ್ ನಿರ್ವಹಿಸಿರಬೇಕಾದ ಕಂದಾಯ ಇಲಾಖೆ, ಅದರಲ್ಲಿ ದರ್ಖಾಸ್ತಿಗೆ ಅರ್ಜಿ ಸಲ್ಲಿಸಿರುವವರ ವಿವರ ಮತ್ತು ಅವರ ಜಾತಿ ಮತ್ತು ದರ್ಖಾಸ್ತಿಗೆ ಸಲ್ಲಿಸಿರುವ ಅರ್ಹತಾ ವಿವರಗಳು ಇರುತ್ತವೆ. ಸದರಿ ಜಮೀನು ದರ್ಖಾಸ್ತಿನಲ್ಲಿ ಮಂಜೂರಾಗಿದ್ದಲ್ಲಿ ಅಂತಹ ವಿವರ ಲಭ್ಯವಾಗಬೇಕಿದ್ದು ಅಂತಹ ಯಾವುದೇ ವಿವರವನ್ನು ಪರಿಶೀಲಿಸಿ ಚಿಕ್ಕರಂಗಯ್ಯ ಬಿನ್ ನಡುಕೇರಯ್ಯ ಎಂಬುವವರು ಪರಿಶಿಷ್ಟರೇ ಎಂಬುದನ್ನು ರುಜುವಾತು ಪಡಿಸಿಕೊಳ್ಳದೆ ಮಾಡಿರುವ ಆದೇಶವು ಕಾನೂನು ಬಾಹಿರತೆಯಿಂದ ಕೂಡಿರುತ್ತದೆ. ಸದರಿ ಅಂತಹ ದರ್ಖಾಸ್ತು ವಹಿ ಇಲ್ಲವಾದರೆ ಸದರಿ ಜಮೀನು ಕಿಮ್ಮತಿಗೆ ಹರಾಜಾಗಿರುವ ಜಮೀನು ಆಗಿರುತ್ತದೆ. ನಮಗೆ ದೊರೆತಿರುವ ಹಿಂಬರಹದಂತೆ ಸದರಿ ಗ್ರಾಂಟ್ ರಿಜಿಸ್ಟರ್ ವಹಿ ಇಲ್ಲವೆಂದು ಸಂಬಂದಿಸಿದ ತಹಸೀಲ್ದಾರರು ತಿಳಿಸಿರುತ್ತಾರೆ.

12. ಸದರಿ ದರ್ಖಾಸ್ತು ಪಡೆದಿರುವವರು ಪರಿಶಿಷ್ಟರೇ ಎಂಬುದು ಗಮನಿಸಬೇಕಿರುತ್ತದೆ. ಹಾಲೀ ಅರ್ಜಿದಾರರು ಪರಿಶಿಷ್ಟರೇ ಎಂದು ನೋಡುವುದಕ್ಕೆ ಅರ್ಜಿದಾರರೇ ಅಂತಹ ಗ್ರಾಂಟಿ ರವರ

ಮಕ್ಕಳು ಎಂದು ರುಜುವಾತು ಆಗುವುದಕ್ಕೆ ಯಾವುದೇ ಪುರಾವೆ ಇಲ್ಲದ್ದರಿಂದ ಮತ್ತು ಸದರಿ ಗ್ರಾಂಟಿ ಮತ್ತು ಅರ್ಜಿದಾರರ ತಂದೆ ಇಬ್ಬರೂ ಒಂದೆ ಎಂಬುದಕ್ಕೆ ಪುರಾವೆ ಇಲ್ಲದ ಕಾರಣ, ಗ್ರಾಂಟಿ ಪರಿಶಿಷ್ಟರೇ ಎಂಬುದು ನೋಡಬೇಕಾದ ಅವಶ್ಯಕತೆ ಇರುವುದರಿಂದ ಗ್ರಾಂಟ್ ರಿಜಿಸ್ಟರ್ ಅವಶ್ಯವಾಗಿರುತ್ತದೆ. ಈ ಬಗ್ಗೆ ಮೇಲ್ಮನವಿದಾರರು ಗ್ರಾಂಟ್ ರಿಜಿಸ್ಟರ್ ನಕಲು ಕೋರಲಾಗಿ ತಹಸೀಲ್ದಾರ್ ಕಚೇರಿಯಿಂದ ಕಡತ ಲಭ್ಯವಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಕಡತವಿಲ್ಲದೆ ನಿರ್ಧಾರಕ್ಕೆ ಬರುವುದು ಕಾನೂನು ಬದ್ದವಾಗಿರುವುದಿಲ್ಲವಾದ್ದರಿಂದ ಪ್ರಶ್ನಿತ ಆದೇಶ ಅಸಿಂದುವಾಗಿರುತ್ತದೆ.

13. ಕೆಳ ನ್ಯಾಯಾಲಯದಲ್ಲಿ ಅರ್ಜಿದಾರರು ಅವರ ಜಾತಿಯ ಜೆರಾಕ್ಸ್ ಪ್ರತಿಯನ್ನು ಹಾಜರು ಪಡಿಸಿರುವುದಾಗಿ ತಿಳಿಸುತ್ತಾರೆ, ಅದನ್ನೇ 1ನೇ ಎದುರುದಾರರು ಪರಿಗಣನೆಗೆ ತೆಗೆದುಕೊಳ್ಳುತ್ತಾರೆ. ಜೆರಾಕ್ಸ್ ಪ್ರತಿಗಳನ್ನು ಪರಿಗಣಿಸಬಾರದು ಎಂದು ಕಾನೂನು ಸಿದ್ದಾಂತವೇ ಇರುವಾಗ ಹೀಗೆ ಮಾಡುವುದು ಕಾನೂನು ಬಾಹಿರವಾಗಿರುತ್ತದೆ. ಅರ್ಜಿದಾರರ ಜಾತಿ ಯಾವುದು ಎಂಬುದು ಇಲ್ಲಿ ಪ್ರಮುಕವಲ್ಲ, ಭೂ ಮಂಜೂರಾತಿ ಪಡೆದವರು ಮಂಜೂರಾತಿ ಸಮಯದಲ್ಲಿ ಪರಿಶಿಷ್ಟ ಜಾತಿ ಅಥವ ಪರಿಶಿಷ್ಟ ಪಂಗಡಕ್ಕೆ ಸೇರಿದ್ದರೆ ಎಂದು ಹಳೇ ದಾಖಲಾತಿಗಳು ನಿರ್ವಿವಾದವಾಗಿ ಹೇಳುತ್ತೇವೆಯೇ ಎಂಬುದು ನೋಡಬೇಕಿರುತ್ತದೆ. ಹಾಲಿ ಕೇಸು ಹಾಕಿದ ನಂತರ ಬರೆಸಿಕೊಂಡು ಬಂದ ಪ್ರಮಾಣ ಪತ್ರಗಳಾಗಲೀ, ಬೇರೆ ಯಾರದ್ದೋ ಜಾತಿ ಪ್ರಮಾಣಪತ್ರಗಳಾಗಾಲೀ ಇಲ್ಲಿ ಪ್ರಸ್ತುತವಲ್ಲ.

14.1 ನೇ ಎದುರುದಾರರು ತಮ್ಮ ಆದೇಶದಲ್ಲಿ ವಂಶವೃಕ್ಷದ ಜೆರಾಕ್ಸ್ ಪ್ರತಿಯಂತೆ ಚಿಕ್ಕರಂಗಯ್ಯನ ಹೆಸರನ್ನು ಮಂಜೂರಿದಾರನ ಹೆಸರೆಂದು ಪರಿಗಣಿಸಿರುವುದು ಕಾನೂನು ಭಾಹಿರವಾಗಿರುತ್ತದೆ. ವಂಶವೃಕ್ಷದ ಪ್ರತಿಯಲ್ಲಿ ಮಂಜೂರಿದಾರನು ಎಂದು ಎಲ್ಲಿ ಇರುತ್ತದೆ? ಜೆರಾಕ್ಸ್ ಪ್ರತಿಗಳನ್ನು ಪರಿಗಣಿಸಬಾರದು ಎಂದು ಕಾನೂನು ಸಿದ್ದಾಂತವೇ ಇರುವಾಗ ಹೀಗೆ ಮಾಡುವುದು ಕಾನೂನು ಬಾಹಿರವಾಗಿರುತ್ತದೆ. ವಂಶವೃಕ್ಷವನ್ನು ಪರಿಗಣಿಸುವ ಬಗ್ಗೆ ಹೇಗೆ ಎಂಬ ಬಗ್ಗೆ ತೋರಲು ಮಾನ್ಯ ಸುಪ್ರೀಮ್ ಕೋರ್ಟಿನಲ್ಲಿ ಆಗಿರುವ ತೀರ್ಪಿನ ಬಗ್ಗೆ ಮಾನ್ಯ ನ್ಯಾಯಾಲಯದ ಗಮನ ಸೆಳೆಯಲು ತೀರ್ಪಿನ ಉದ್ರುತ ಬಾಗವನು ಇಲ್ಲಿ ಉಲ್ಲೇಖಿಸಿರುತ್ತೆ. **IN a case of STATE OF BIHAR Vs. RADHA KRISHNA SINGH & ORS. AIR 1983 SC 684 it was observed on G-TREE as follows** "The principles governing such cases are: (i) Genealogies admitted or proved to be old and relied on in previous cases are doubtless relevant and in some cases may even be conclusive of the facts proved, but there are several considerations

which must be kept in mind viz.: (a) Source of the genealogy and its dependability. (b) Admissibility of the genealogy under the Evidence Act. (c) A proper use in decisions or judgments on which reliance is placed. (d) Age of genealogies. (e) Litigations where such genealogies have been accepted or rejected. (2) On the question of admissibility the following tests must be adopted: (a) The genealogies of the families concerned must fall within the four- corners of s. 32(5) or s. 13 of the Evidence Act. (b) They must not be hit by the doctrine of post litem motam. (c) The genealogies or the claims cannot be proved by recitals, depositions or facts narrated in the judgment which have been held by a long course of decisions to be inadmissible. (d) Where genealogy is proved by oral evidence, the said evidence must clearly show special means of knowledge disclosing the exact source, time and the circumstances under which the knowledge is acquired, and this must be clearly and conclusively proved."

15. ಜೆರಾಕ್ಸ್ ಪ್ರತಿಗಳನ್ನು ಮತ್ತು ಯೋಗ್ಯವಲ್ಲದ ನವೀನ ದಾಖಲಾತಿಗಳನ್ನು ಹೇಗೆ ಪರಿಗಣಿಸುವುದು ಅಘಾತಕಾರಿ ಎಂಬ ಬಗ್ಗೆ ತೋರಲು ಮಾನ್ಯ ಸುಪ್ರೀಮ್ ಕೋರ್ಟಿನಲ್ಲಿ ಆಗಿರುವ ತೀರ್ಪಿನ ಬಗ್ಗೆ ಮಾನ್ಯ ನ್ಯಾಯಾಲಯದ ಗಮನ ಸೆಳೆಯಲು ತೀರ್ಪಿನ ಉದೃತ ಬಾಗವನು ಇಲ್ಲಿ ಉಲ್ಲೇಖಿಸಿರುತ್ತೆ. IN a case of STATE OF BIHAR Vs. RADHA KRISHNA SINGH & ORS. AIR 1983 SC 684 it was observed as follows: "Admissibility of a document is one thing and its probative value, quite another: a document may be admissible and yet may not carry any conviction and weight or its probative value may be nil. It is also well settled that statements or declarations before persons of competent knowledge made ante litem motam are receivable to prove ancient rights of a public or general nature. The admissibility of such declarations is, however, considerably weakened if it pertains not to public rights but to purely private rights. It is equally well settled that declarations or statements made post litem motam would not be admissible because in cases or proceedings taken or declarations made ante litem motam, the element of bias and concoction is eliminated. Before, however, the statements of the nature mentioned above can be admissible as being ante litem motam they must not only be before the actual existence of any controversy, but should be made even before the commencement of legal proceedings. This

position however cannot hold good of statements made post litem motam which would be clearly inadmissible in evidence. The reason for this rule seems to be that after a dispute has begun or a legal proceeding is about to commence, the possibility of bias, concoction or putting up false pleas cannot be ruled out."

16. ಗ್ರಾಂಟ್ ರಿಜಿಸ್ಟರ್ ಇಲ್ಲದೆ ಇತರೆ ದಾಖಲಾತಿಗಳನ್ನು ಹೇಗೆ ಪರಿಗಣಿಸುವುದು ಅಘಾತಕಾರಿ ಎಂಬ ಬಗ್ಗೆ ತೋರಲು ಮಾನ್ಯ ಕರ್ನಾಟಕ ಹೈ ಕೋರ್ಟಿನಲ್ಲಿ ಆಗಿರುವ ತೀರ್ಪಿನ ಬಗ್ಗೆ ಮಾನ್ಯ ನ್ಯಾಯಾಲಯದ ಗಮನ ಸೆಳೆಯಲು ತೀರ್ಪಿನ ಉದೃತ ಬಾಗವನು ಇಲ್ಲಿ ಉಲ್ಲೇಖಿಸಿರುತ್ತೆ. **ILR 2002 KAR 3734, 2002 (5) KarLJ 492 JUSTICE S Bannurmath In Smt. Chowdamma vs The Special Deputy Commissioner And Ors.** Assistant Commissioner is required to find out what exactly was the nature of the grant. This he has to do only on the basis of either the original grant order or, if for some reason like the grant was made decades ago and as such the order of grant is not available, at least he has to look into the grant register maintained for this purpose. Time and again this Court has emphasised that the authorities cannot simply rely upon the saguvali chit produced by either of the parties. The saguvali chits are like certificates and in most of the cases issued casually in the sense the saguvali chits are in printed form and while issuing the same most of the times the unnecessary and inapplicable portion is even not scored off, for example, in the first clause it is to be mentioned the land was granted by way of sale or public auction or for upset price or free of costs. The grant would be under any one of these categories. It is noticed that in most of the cases, even this unnecessary portion is not scored off thereby leaving it open to the imagination of the parties and authorities as to what is the nature of grant. Similarly, as law requires the non-alienation period is also be mentioned as a part of conditions in the saguvali chit. But, this is also not done usually. This Court has held that issuance of saguvali chit is an incidental act like issuing certificate practically being administrative action on the part of the authorities, but, for the purpose of application of the provisions of the Land Grant Rules and the PTCL Act the authorities are required to look into the original grant order or the records concerning it including the Land Grant Register maintained for this purpose of

which the authorities themselves are custodian. Without looking into these vital documents, most of the time the authorities just casually rely upon the saguvali chit and pass orders one way or the other. Since on one hand violation of the provisions of the Land Grant Rules and the PTCL Act, vis-a-vis the property right by way of transfer is involved, the authorities are required and expected to make thorough enquiry especially when in most of the cases the grantees are illiterate persons coming from lower strata of the society. It is a mandatory duty of the authorities, as laid down by the Division Bench in Pedda Reddy's case, cited supra, to verify from the records and give their findings based on such records. If that is not done, the orders passed by such authorities are unsustainable ones.

17. ವಂಶವೃಕ್ಷವನ್ನು ಪರಿಗಣಿಸುವ ಬಗ್ಗೆ ಹೇಗೆ ಎಂಬ ಬಗ್ಗೆ ತೋರಲು ಮಾನ್ಯ ಸುಪ್ರೀಮ್ ಕೋರ್ಟಿನಲ್ಲಿ ಆಗಿರುವ ತೀರ್ಪಿನ ಬಗ್ಗೆ ಮಾನ್ಯ ನ್ಯಾಯಾಲಯದ ಗಮನ ಸೆಳೆಯಲು ತೀರ್ಪಿನ ಉದ್ಧೃತ ಬಾಗವನು ಇಲ್ಲಿ ಉಲ್ಲೇಖಿಸಿರುತ್ತೆ. **IN a case of STATE OF BIHAR Vs. RADHA KRISHNA SINGH & ORS. AIR 1983 SC 684** it is observed as follows: "In considering the oral evidence regarding a pedigree a purely mathematical approach cannot be made because where a long line of descent has to be proved spreading over a century, it is' obvious that the witnesses who are examined to depose to the genealogy would have to depend on their special means of knowledge which may have come to them through their ancestors but, at the same time, there is great risk and a serious danger involved in relying solely on the evidence of witness given from pure memory because the witness who are interested normally have a tendency to draw more from their imagination or turn and twist the facts which they may have heard from their ancestors in order to help the parties for whom they are deposing. The court, must therefore safeguard that the evidence of such witness may not be accepted as it is based purely on imagination or an imaginary or illusory source of information rather than special means of knowledge as required by law. The oral testimony or the witness on this matter is bound to be hearsay and their evidence is admissible as an exception to the general rule where hearsay evidence is not admissible. In the appreciation of evidence of such witnesses, the principles to be borne in mind are: (1) The

relationship or the connection however close it may be, which the witness bears to the persons whose pedigree is sought to be deposed by him. (2) The nature and character of the special means of knowledge through which the witness has come to know about the pedigree. (3) The interested nature of the witness concerned. (4) The precaution which must be taken to rule out any false statement made by the witness post litem motam or one which is derived not by means of special knowledge but purely from his imagination, and (5) The evidence of the witness must be substantially corroborated as far as time and memory admit."

18. ಸಾರ್ವಜನಿಕ ಹರಾಜಿನಲ್ಲಿ ಖರೀದಿಸಿದ್ದರೆ ಸದರಿ ಪಿ.ಟಿ.ಸಿ.ಎಲ್ ವ್ಯಾಪ್ತಿಗೆ ಬರುವುದಿಲ್ಲ ವೆಂದು ತೋರಲು ಮಾನ್ಯ ಕರ್ನಾಟಕ ಹೈಕೋರ್ಟಿನ ತೀರ್ಪಿನ ಉದ್ರುತ ಬಾಗವನ್ನು ಉಲ್ಲೇಖಿಸಲಾಗಿದೆ. ಅದನ್ನು ಮಾನ್ಯ ನ್ಯಾಯ್ಯಾಲಯ ಪರಿಗಣಿಸುವಂತೆ ಕೋರುತ್ತೇನೆ. **In K.G. Vishwanath vs Muniyappa And Others 1999 (4) KarLJ 476 Annexure-A** : Saguvali Chit in this regard is extracted below:-- On a plain reading of this relevant portion of Annexure-A it becomes clear that the amount of Rs. 26.10 collected from respondent 1 was towards price of one acre of land granted to him, it being nobody's case that the land was put to public auction by the Government and the same was purchased by respondent 1" in any such auction so as to hold his acquisition of the land by this mode of alienation which is also indicated in Annexure-A. It was contended by learned Government Advocate and learned Counsel for respondent 1 that the amount of Rs. 26.10 shown in Annexure-A did not represent the price of the land but in fact it was the amount paid by respondent 1 towards certain miscellaneous charges. Therefore, they argued that the grant was free of cost which attract applicability of Rule 43-G(4). As indicated above, the basis for this contention was the non-alienation condition contained in Annexure-A. I find this submission unacceptable as it is inconsistent with the mode of alienation to be found in Annexure-A. It is impermissible to introduce into Annexure-A such a fact on mere conjecture militating against the unambiguous contents thereof clearly indicating that the said amount of Rs. 26.10 was the price of the said land. ………………. whether the particular amount collected from the grantee by the granting authority for the land granted represented the full market value of the land or the price less than

that of the market value is the question of fact that is required to be gone into by the Enquiry Authority (Assistant Commissioner) in course of his enquiry and his definite finding on this point should be recorded by him before sub-rule (4) of Rule 43-G is applied to the particular case of alienation of the granted land. ……………. It is not necessary for the opposing party before the Assistant Commissioner to specifically raise this objection for his consideration since it is the legal duty cast on him by Rule 43-G(4) to determine it irrespective of any such objection was raised by the contesting party or not. In that perspective and in the light of the ruling of the Division Bench of this Court in Pedda Reddy's case, supra, to the effect that Assistant Commissioner is bound to record his finding on the said question, the observation of the Single Bench in Basappa's case, supra, holding that if the amount collected by the grantee is too low it has to be presumed that the same is levied and collected as a nominal sum and not the market value, will have to yield to the Division Bench ruling. Therefore the petition deserves to be allowed to this limited extent. ………. The impugned orders of respondents 2 and 3 are set aside only for the purpose of decision by the Assistant Commissioner of the question whether the amount of Rs. 26.10 collected from respondent 1-grantee for the granted land is towards its market value or not.

19. ಭೂ ಮಂಜೂರಾತಿ ಪಡೆದವರು ಪರಿಶಿಷ್ಟರೆ ಅಲ್ಲವೆ ಎಂಬುದು ಪ್ರಮುಖ ವಿಚಾರವಾಗಿರುತ್ತದೆ. ಉದಾಹರಣೆಗೆ ‘ಎ’ ಎಂಬ ಭೂ ಮಂಜೂರಾತಿದಾರನು ಮೇಲ್ಜಾತಿಯವನಾಗಿದ್ದು ಸರ್ಕಾರಕ್ಕೆ ತನ್ನ ಜಾತಿಯನ್ನು ಮಂಜೂರಾತಿಗಾಗಿ ಸಲ್ಲಿಸಿರುವ ಅರ್ಜಿಯಲ್ಲಿ ತಿಳಿಸಿ ಅದಕ್ಕೆ ಪೂರಕವಾಗಿ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಿರುತ್ತಾನೆ. ನಂತರ ಪರಿಶಿಷ್ಟ ಜಾತಿಯ ಮಹಿಳೆಯನ್ನು ಮದುವೆಯಾಗಿತ್ತಾನೆ. ಅವನಿಗೆ ಹುಟ್ಟುವ ಮಗನು ಹಿಂದು ಕಾನೂನಿನಂತೆ ಅವನ ಜಾತಿಗೆ ಸೇರುತ್ತಾನೆ. ಆದರೆ ಸದರಿ ಅಂತಹ ಮಗನು ತನ್ನ ತಾಯಿ ಜಾತಿ ಪ್ರಮಾಣ ಪತ್ರದ ಆಧಾರದಲ್ಲಿ ತನ್ನ ಜಾತಿಯನ್ನು ಪರಿಶಿಷ್ಟನು ಎಂದು ಪಡೆದು ತನ್ನ ತಂದೆಯ ಜಾತಿಯನ್ನು ಪರಿಶಿಷ್ಟನು ಎಂದು ತೋರಲು ಸಾಧ್ಯವೆ ? ಖಂಡಿತ ಆಗಲಾರದು. ಸದರಿ ಕಾರಣಕ್ಕೆ ಭೂ ಮಂಜೂರಿದಾರನ ಭೂ ಮಂಜೂರಾತಿ ದಿನದಲ್ಲಿ ಇದ್ದ ಜಾತಿ ಅಂದಿನ ದಾಖಲಾತಿ ಆಧಾರದಲ್ಲಿ ನಿರ್ದರಿಸಬೇಕಿರುತ್ತದೆ. ಅಂತಹ ಪ್ರಮುಖ ದಾಖಲಾತಿಗಳ ಪೈಕಿ, ಹಳೆಯ ರೇಷನ್ ಕಾರ್ಡ, (ಜಾತಿ ಮತ್ತು ಸಂಬಂದ ಉಲ್ಲೇಖಗಳು) ಹಳೆಯ ಜಾತಿ ಪ್ರಮಾಣ ಪತ್ರ, ಗ್ರಾಂಟ್ ಸರ್ಟಿಫಿಕೇಟಿನಲ್ಲಿ ಜಾತಿ

ಉಲ್ಲೇಖ, ಅಥವ ಇತರೆ ಹಳೆ ದಾಖಲಾತಿಗಳಲ್ಲಿ ಜಾತಿ ಉಲ್ಲೇಖ ಇರುವುದನ್ನು ಅರ್ಜಿದಾರನ್ನು ನಿಜವಾಗಿಯೂ ಸತ್ಯವಂತನಾಗಿದ್ದರೆ ಹಾಜರು ಪಡಿಸಿರುತ್ತಾನೆ. ಈ ರೀತಿಯ ದಾಖಲಾತಿಗಳೇ ಇಲ್ಲದೆ ಮತ್ತು ಅಂತಹವು ಇದ್ದರೂ ಹಾಜರು ಪಡಿಸದೆ ವಿಷಯವನ್ನು ಮುಚ್ಚಿಟ್ಟಿರುವ ಅರ್ಜಿದಾರನಿಗೆ ಕೋರಿರುವ ಪರಿಹಾರವನ್ನು ನೀಡುವುದು ಕಾನೂನು ಭಾಹಿರವಾಗಿರುತ್ತದೆ. ಈ ಬಗ್ಗೆ ಅರ್ಜಿದಾರನು ಕೆಲವು ದಾಖಲಾತಿಗಳನ್ನು ಬೇಕೆಂದೇ ನ್ಯಾಯಾಲಯದ ಮುಂದೆ ಮುಚ್ಚಿಟ್ಟಿರುವುದು ಕಾನೂನು ಭಾಹಿರವೆಂದು ತೋರಲು ಮಾನ್ಯ ಸುಪ್ರೀಂ ಕೋರ್ಟಿನ ತೀರ್ಪಿನ ಉದ್ಧೃತ ಬಾಗವನ್ನು ಉಲ್ಲೇಖಿಸಿರುತ್ತೆ. **Observations of the Hon'ble Supreme Court in the case of Gopal Krishnaji Ketkar v. Mahomed Haji latif and Ors. (1968) 3 S.C.R.:** Even if the burden of proof does not lie on a party the Court may draw an adverse inference if he withhold important documents in his possession which can throw light on the facts at issue. It is not, in our opinion, a sound practice for those desiring to rely upon a certain state of facts to withhold from the Court the best evidence which is in their possession which could throw light upon the issues in controversy and to rely upon the abstract doctrine of onus of proof.

20. *ಯಾವೊಬ್ಬ ವ್ಯಕ್ತಿಯು ಅರ್ಜಿಸಲ್ಲಿಸುವ ಸಮಯದಲ್ಲಿ ವ್ಯಾಜ್ಯ ಕಾರಣವನ್ನು, ಕಾಲಮಿತಿಯೊಳಗೆ ಸಲ್ಲಿಸಲಾಗಿದೆಯೇ, ವಿಳಂಬಕ್ಕೆ ಕಾರಣವೇನು ಎಂಬ ಬಗ್ಗೆ ಯಾವುದೇ ಮೂಲ ಸ್ವರೂಪವನ್ನು ಮುಚ್ಚಿಡದೆ ಮಾನ್ಯ ನ್ಯಾಯಾಲಯಕ್ಕೆ ತಿಳಿಸಬೇಕು. ಅಂತಹ ಮುಚ್ಚುವಿಕೆ ಮಾಡುವುದು ಎದುರುದಾರರಿಗೆ ಮಾತ್ರ ಮೋಸಮಾಡಿದಂತೆ ಅಲ್ಲ ನ್ಯಾಯಾಲಯಕ್ಕೂ ಮೋಸ ಮಾಡಿದಂತೆ ಎಂದು ಶ್ರೇಷ್ಠ ನ್ಯಾಯಾಲಯದ ತೀರ್ಪಿನ ಸಿದ್ಧಾಂತವನ್ನು ಮಾನ್ಯ ನ್ಯಾಯಾಲಯದ ಅವಗಾಹನೆಗೆ ತರಲಾಗಿದೆ.* **In Arunima Baruah vs Union of India & Ors 2007 (6) scc 120** "It is trite law that so as to enable the court to refuse to exercise its discretionary jurisdiction suppression must be of material fact. What would be a material fact, suppression whereof would disentitle the appellant to obtain a discretionary relief, would depend upon the facts and circumstances of each case. Material fact would mean material for the purpose of determination of the lis, the logical corollary whereof would be that whether the same was material for grant or denial of the relief. If the fact suppressed is not material for determination of the lis between the parties, the court may not refuse to exercise its discretionary jurisdiction. It is also trite that a person invoking the

discretionary jurisdiction of the court cannot be allowed to approach it with a pair of dirty hands.” ಪ್ರಶ್ನಿತ ಆದೇಶದಲ್ಲಿ ಅರ್ಜಿದಾರರೊಬ್ಬರೆ ಕೆಲವು ಮಾಹಿತಿಯನ್ನು ಮುಚ್ಚಿರುವುದಿಲ್ಲ, ಈ ಮೇಲ್ಮನವಿಯ 1 ನೇ ಎದುರುದಾರರು ತಮ್ಮ ಇಲಾಖೆಯ ಅಧೀನದಲ್ಲಿ ದೊರೆಯಬಹುದಾದ ದಾಖಲಾತಿಗಳನ್ನು ಪರಿಶೀಲಿಸಿ ಆದೇಶಿಸಿರುವುದಿಲ್ಲ. ಗ್ರಾಂಟ್ ರಿಜಿಸ್ಟರ್ ಏಕೆ ಪರಿಶೀಲಿಸಿಲ್ಲ? ಅದು ಏನಾಯಿತು ? ಇಲ್ಲಿವರೆಗೆ ಖಾತೆ ಬದಲಾವಣೆ ಆದ ಪರಿ ಹೇಗೆ ? ಈ ಬಗ್ಗೆ ಅನೇಕ ಸರ್ಕಾರಿ ಸುತ್ತೋಲೆಗಳು ಗ್ರಾಂಟ್ ಜಮೀನು ಪರಬಾರೆ ಮಾಡಬಾರದು, ನೊಂದಾವಣಿ ಮಾಡಬಾರದು, ಖಾತೆ ಬದಲಾವಣಿ ಮಾಡಬಾರದು, ಗ್ರಾಂಟ್ ರಿಜಿಸ್ಟರ್ ಪರಿಶೀಲಿಸಬೇಕು ಎಂದು ಇನ್ನು ಹಲವು ಮಾರ್ಗದರ್ಶಿಗಳಿಂದ ಕೂಡಿದ ಎಚ್ಚರಿಕೆಯ ಸರ್ಕಾರಿ ಕಾನೂನು ಸುತ್ತೋಲೆಯನ್ನು ಆಗಿಂದಾಗ್ಗೆ ಅಧೀನ ಅಧಿಕಾರಿಗಳಿಗೆ ಕಳಿಸುತ್ತಿದ್ದರೂ ನಾಲ್ಕಾರು ಬಾರಿ ಖಾತೆ ಬದಲಾವಣಿ ಆಗಿರುವುದಾದರೂ ಹೇಗೆ? ಬದಲಾವಣಿ ಕಾನೂನು ರೀತಿಯಲ್ಲಿಯೇ ಆಗಿರುತ್ತದೆ. ಅದನ್ನು ಕಾನೂನು ಭಾಹಿರ ವಾಗಿ ಆಗಿದೆ ಎಂಬುದನ್ನು ಸರ್ವರೀತಿಯ ರುಜುವಾತಿನೊಂದಿಗೆ ನಿರ್ದಾರಕ್ಕೆ ಬರುವ ಕರ್ತವ್ಯ ಎಲ್ಲರದ್ದಾಗಿರುತ್ತದೆ, ಹಲವಾರು ದಾಖಲಾತಿಗಳನ್ನು ಮುಚ್ಚಿ ನಿರ್ದರಿಸುವುದು ಕಾನೂನು ಭಾಹಿರವಾಗಿರುತ್ತದೆ.

21. *ನ್ಯಾಯಾಲಯದ ಮುಂದಿರುವ ಪಾರ್ಟಿಗಳು ಮೋಸ ಪ್ರಕ್ರಿಯೆ ಮಾಡುವುದು, ಹಲವಾರು ವಿಚಾರಗಳನ್ನು ಮುಚ್ಚಿಡುವುದು, ತಪ್ಪು ವಿಚಾರಗಳನ್ನು ಮುಂದುಮಾಡುವುದು ಮೋಸಮಾಡುವುದು ಸಲ್ಲದು ಎಂಬ ವಿಚಾರವನ್ನು ಮಾನ್ಯ ಸುಪ್ರೀಮ್ ಕೋರ್ಟ್ ಈ ಕೆಳಕಂಡ ಕೇಸಿನಲ್ಲಿ ವಿಸ್ತಾರವಾಗಿ ಹೀಗೆ ಹೇಳಿದೆ ಅದರ ಉಲ್ಲೇಖಿತ ಬಾಗವನ್ನು ಮಾನ್ಯ ನ್ಯಾಯಾಲಯದ ಅವಗಾಹನೆಗೆ ಈ ಕೆಳಗೆ ಉಲ್ಲೇಖಿಸಿದೆ.* It is kindly brought to the kind attention of Hon’ble court the observations of Supreme court in THE STATE OF ANDHRA PRADESH & ANOTHER V. T.SURYACHANDRA RAO, [(2005) 6 SCC 149], wherein the Honourable Supreme Court has observed as follows: " "Fraud" as is well known vitiates every solemn act. Fraud and justice never dwell together. Fraud is a conduct either by letter or words, which includes the other person or authority to take a definite determinative stand as a response to the conduct of the former either by words or letter. It is also well settled that misrepresentation itself amounts to fraud. Indeed, innocent misrepresentation may also give reason to claim relief against fraud. A fraudulent misrepresentation is called deceit and consists in leading a man into damage by willfully or recklessly causing him to believe and act on falsehood. It is a fraud in law if a party makes representations,

which he knows to be false, and injury enures therefrom although the motive from which the representations proceeded may not have been bad. An act of fraud on court is always viewed seriously. A collusion or conspiracy with a view to deprive the rights of the others in relation to a property would render the transaction void ab initio. ಸದರಿ ಜಮೀನು ಪಿ.ಟಿ.ಸಿ.ಎಲ್ ವ್ಯಾಪ್ತಿಗೆ ಬರುವುದಿಲ್ಲ ಎಂಬ ನಮ್ಮ ನಿಲುವನ್ನು ಸಡಲಿಸದೆ, ಕೇವಲ ವಾದಕ್ಕಾಗಿ ಹೇಳುವುದಾದರೆ ಪ್ರಶ್ನಿತ ಕೇಸಿನಲ್ಲಿ ಯಾರು ಫ್ರಾಡ್ ಮಾಡಿಲ್ಲ, ಮೊದಲಿಗೆ ಮಾರಾಟಮಾಡಿದವರು, ಅದನ್ನು ನೊಂದಾವಣಿ ಮಾಡಿದ ಅಧಿಕಾರಿ, ಖಾತೆ ಮಾಡಿಕೊಟ್ಟವರು ಫ್ರಾಡ್ ಮಾಡಿದ್ದರೆ, ನಂತರ ಎಲ್ಲಾ ಕಾನೂನು ಬಲ್ಲ ಮತ್ತು ಜಾರಿ ಮಾಡುವ ಕಂದಾಯ ಅಧಿಕಾರಿಗಳು ಆಗಿಂದ್ದಾಗ್ಗೆ ಖಾತೆ ಬದಲಾಯಿಸಿ, ದೀರ್ಘ ಕಾಲ ಖಾತೆ, ಸ್ವಾಧೀನತೆಯನ್ನು ತೋರಿ ಮಾಲೀಕತ್ವ ದೃಡವಾಗಿದೆ, ಯಾವುದೇ ಲೋಪವಿಲ್ಲ ಎಂಬ ವಾಸ್ತವಿಕತೆಯನ್ನು ದೀರ್ಘಾವದಿ ತೋರಿರುವುದು ಫ್ರಾಡ್ ಅಲ್ಲವೆ. ತಮ್ಮದಲ್ಲದ ತಪ್ಪಿನ ವಿಚಾರಕ್ಕೆ ಮೋಸಕಾರಕ ಧೀರ್ಘಕಾಲಿಕ ನಿಲುವಿಗೆ ಬಲಿಯಾದ ವ್ಯಕ್ತಿಯ ವಿರುದ್ದ 20 ವರ್ಷದ ನಂತರ ಕಾನೂನು ಸಮರಕ್ಕೆ ಯಾವುದೇ ಕಾಲಮಿತಿ ಕಾನೂನು ಅಂಕೆಯಿಲ್ಲದೆ ಮುಂದುವರಿಯಲು ಬಿಡುವುದು ವ್ಯಾಜ್ಯ ಪರಿಹಾರ ನೀತಿಯೇ? ವ್ಯಾಜ್ಯಕ್ಕೆ ಕೊನೆಯಿಲ್ಲ ಎಂದು ಸಾರುತ್ತ ಮನುಜನು ಯವುದೇ ರೀತಿಯ ಕಾಯಕಕ್ಕೆ ಮುಂದಾಗದೆ ಅಂಜಿ ಮನೆಯಲ್ಲಿ ಕೂರಲಿ ಎಂದು ದ್ಯೇಯೋದ್ದೇಶ ದಿಂದ ಈ ಕಾನೂನುಗಳು ರಚಿತವಾಗಿರುವುದೇ? ಅಶಕ್ತರನ್ನು ರಕ್ಷಿಸಲು ಕಾನೂನು ಬೇಕು, ಆದರೆ ಅದೇ ಅಶಕ್ತರ ಕಾನೂನು ಬಳಸಿ ಮೋಸಮಾಡಿರುವವರನ್ನು / ಮಾಡುತ್ತಿರುವವರನ್ನು ಏನೆನ್ನಬೇಕು ? ಕಾನೂನಿನಿಂದ ಅಶಕ್ತರನ್ನು ಕಾಪಾಡಿ ಆದರೆ ಕಾಪಾಡುವ ನೀವೇ ಅಶಕ್ತವರ್ಗವನ್ನು ಧುರ್ಬಳಕೆ ಮಾಡಿಕೊಂಡು ಇನ್ನೊಂದು ಅಶಕ್ತ ಸಮಾಜವನ್ನು ಮೋಸಕ್ಕೆ ಒಳಗಾದ ಸಮಾಜವನ್ನು ನಿರ್ಮಿಸುವುದು ನ್ಯಾಯವೇ?

22. ಪ್ರಶ್ನಿತ ಆದೇಶದಲ್ಲಿ ಯಾವ ಕಾರಣಕ್ಕೆ ಸದರಿ ಆದೇಶ ಮಾಡಲಾಗಿದೆ ಎಂದು ನಿರ್ದಿಷ್ಟವಾಗಿ ತೋರಿರುವುದಿಲ್ಲ. ಅಂತಹ ಆದೇಶವು ಈ ಕೆಳಕಂಡ ನ್ಯಾಯ ಸಿದ್ದಾಂತದ ಅನ್ವಯ ಕಾನೂನು ಭಾಹಿರವಾಗಿರುತ್ತದೆ. ಆದ್ದರಿಂದ ಸದರಿ ಪ್ರಶ್ನಿತ ಆದೇಶವು ರದ್ದತಿಗೆ ಯೋಗ್ಯವಾಗಿರುತ್ತದೆ. **In the case of Cyril Lasrado v. Juliana Maria Lasrado, ILR 2004 Kar 4822,** “where it has been held that reasons are live links between the mind of the decision-taker to the controversy in question and the decision or conclusion arrived at, reasons substitute subjectivity by objectivity. The emphasis on recording reasons is that if the decision reveals the "inscrutable face

of the sphinx" it can by its silence render it virtually impossible for the Courts to perform their appellate function or exercise the power of judicial review in adjudging the validity of the decision. Right to reason is an indispensable part of a sound judicial system, reasons at least sufficient to indicate an application of mind to the matter before Court. Another rationale is that the affected party can know why the decision has gone against him. One of the salutary requirements of natural justice is spelling out reasons for the order made, in other words a speaking out. **G.V. Ashwathanarayana v. Central Bank of India, By Chairman, Bombay, ILR 2003 Kar 3066**, Wherein it has been held that, it is now well settled that where an authority makes an order in exercise of quasi-judicial functions or an order which has the effect of affecting civil rights of a person and which action is liable to be reviewed by Constitutional Courts, as provided under the Constitution, it must record the reasons in support of the order it makes. **The Supreme Court, in the case of Siemens Eng. and Mfg. Co. of India Limited v. Union of India, AIR 1976 SC 1785** has held that the rule requiring reasons in support of an order is, like the principle of audi alteram partem, a basic principle of natural justice which must inform every quasi-judicial process and this rule must be observed in its proper spirit and mere pretence of compliance with it would not satisfy the requirements of law. Supreme Court, in the case Maneka Gandhi v. Union of India, AIR 1978 SC 597 has held that it hardly requires any emphasis that compulsion of disclosure of reasons guarantees consideration. The condition to give reasons introduced clarity and excludes or at any rate minimizes arbitrariness; it gives satisfaction to the other party against whom the order is made; and it also enables an appellate or supervisory or reviewing Court to keep the Tribunals and authority within bounds. Therefore, a reasonal order is always a desirable condition of judicial disposal or a disposal which is required to be done judiciously."

23. ಕರ್ನಾಟಕ ಉಚ್ಚ ನ್ಯಾಯಾಲಯ ಈ ಬಗ್ಗೆ ಪದೇ ಪದೇ ಹೇಳುತ್ತಲೇ ಬಂದಿದೆ, ಅಸಲು ಗ್ರಾಂಟ್ ಆದೇಶವನ್ನು ನೋಡಿ, ಗ್ರಾಂಟ್ ರಿಜಿಸ್ಟರ್ ಪರಿಶೀಲಿಸಿ, ಕೇವಲ ಮುಟೇಶನ್ ಅಧಾರಿತ ಪಹಣಿ ಎಂಟ್ರಿಗಳಿಗೆ ಮಾನ್ಯತೆ ಕೊಡಬೇಡಿ, ಹೀಗೆ ಹೇಳುತ್ತಲೆ ಬಂದರೂ ಅದನ್ನು ಅಳವಡಿಸಿಕೊಳ್ಳದೆ, ಮುಂದಾಗಿರುವುದು ಇಲಾಖೆಯಿಂದಲೇ ಮುಗ್ದ ಜನರ

ಶೋಷಣೆಗೆ ಇಳಿದಂತೆ ಅಲ್ಲವೆ? ಈ ವಿಚಾರಕ್ಕೆ ಪೂರಕವಾಗಿ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪು ಪ್ರಕಟವಾಗಿರುವ **ILR 2002 KAR 2670 (Nagendrappa and another Vs. Deputy Commissioner, Davanagere and others):**"Authority deciding the matter has to look into the original order of the grant of land and if the same is not available then contemporaneous granting documents like the Register maintained for this purpose what is known as Land Grant Register has to be looked into. Authorities deciding the validity of sale cannot act on presumption on mere mutation entries."

24. ಸುಮಾರು 17 ವರ್ಷದ ಹಿಂದೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ದ್ವಿ ಸದಸ್ಯತ್ವ ಪೀಟ ಮಹತ್ತರ ವಿಚಾರವನ್ನು ಹೇಳಿದೆ ಮೊದಲಿಗೆ ಉಪವಿಭಾಗಾದಿಕಾರಿ, ಸದರಿ ಜಮೀನು ಪರಿಶಿಷ್ಟರಿಗೆ ಸೇರಿರುವುದೇ ಎಂದು ನಿರ್ದರಿಸಬೇಕಿರುತ್ತದೆ. ನಂತರ ಗ್ರಾಂಟ್ ಪುಕ್ಕಟ್ಟೆಯೋ, ಬೆಲೆ ನೀಡಿಕೆಯಿಂದ ನಡೆದಿದೆಯೋ, ಕಾನೂನು ಅಡಿಯಲ್ಲಿ ಇರುವ ನಿಯಮದಂತೆ ಪರಬಾರೆ ಉಲ್ಲಂಘನೆ ಮಾಡಲಾಗಿದೆಯೇ ? ಈ ರೀತಿಯ ಪ್ರಶ್ನೆಗಳನ್ನು ಉತ್ತರಿಸಬೇಕಿರುತ್ತದೆ. ಜಮೀನು ಕೇವಲ ಜೆರಾಕ್ಸ್ ಪ್ರತಿಯ ಆಧಾರದಲ್ಲಿ ಪರಿಶಿಷ್ಟರಿಗೆ ಸೇರಿದೆ ಎಂದು ತೀರ್ಮಾನಕ್ಕೆ ಬರುವುದು ತಪ್ಪಾಗುತ್ತದೆ. **According to the decision reported in ILR 2002 KAR 3734:** "Section 4 and 5: Impugned order of the Deputy Commissioner and Assistant Commissioner are in violation of the law laid down by the Court in the Division Bench ruling in Pedda Reddy vs. State of Karnataka 1993(1) KLJ.P.328 – Assistant Commissioner cannot pass orders unless he records findings viz., (1) that the land belongs to Scheduled Caste or Scheduled Tribe; (2) that the grant was for upset price or for less than the upset price or free grant and (3) that alienation has taken place within the period of the prohibition prescribed in the rules;

25. ದಾಖಲೆಯನ್ನು ಪರಿಶೀಲಿಸುವಾಗ್ಗೆ ದಾಖಲೆಯ ಅಂಶಗಳನ್ನು ಪೂರ್ಣವಾಗಿ ಓದಿ ಅರ್ಥೈಸಿಕೊಳ್ಳಬೇಕಿರುತ್ತದೆ ಹೊರತು ಅದರ ಮೇಲ್ನಾಲಿನಿಂದ ಮಾತ್ರವಲ್ಲ. ಇದರೊಂದಿಗೆ ಪಾರ್ಟಿಗಳ ನಡವಳಿಕೆಯ ಮತ್ತು ಉದ್ದೇಶದ ಮಹತ್ವವನ್ನು ಗಮನಿಸಬೇಕಿರುತ್ತದೆ. **Hon'ble Supreme Court in its decision reported in 2008(3) KCCR.1289 (B.K.Muniraju vs. State of Karnataka and others)** has held that: In order to know the real nature of the document, one has to

look into the recitals of the document and not the title of the document. The intention is to be gathered from the recitals in the deed, the conduct of the parties and the evidence on record. Construction of a document must be made by finding the intention of the executants, firstly, from a comprehensive reading of the terms of the document itself, and then, by looking into the extent permissible, the prevailing circumstances which persuaded the author of the document to execute it. / With a view to ascertain the nature of the transaction, the document must be read as a whole. A sentence or term used may not be determinative of the real nature of the transaction………… whether a land is 'granted land' or land purchased for a price at a public auction' must be ascertained by looking into the relevant records……………… In the present case, Court held that the land in question was a land purchased in the public auction. Merely because the document was styled or titled as 'Certificate of Grant', it cannot be construed that the land was a 'granted land' attracting the provisions of the Act. ………………

26. ಸರಿಯಾದ ಪರಿಶೀಲನೆ ಮಾಡದೆ, ನಿಯಮ ಪಾಲನೆ ಮಾಡದೆ ಇಂತಹ ಪ್ರಕರಣಗಳಲ್ಲಿ ಎದುರುದಾರರಿಗೆ ನೋಟೀಸು ನೀಡುವುದು ಕಾನೂನು ಭಾಹಿರವೆಂದು ಈ ಕೆಳಗಿನ ಸುತ್ತೋಲೆ ಹೇಳುತ್ತದೆ. ಪ್ರಶ್ನಿತ ಕೇಸಿನಲ್ಲಿ ಈ ಕಾನೂನು ಮಾಪನೆ ಉಲ್ಲಂಘಿಸಿರುವುದರಿಂದ ಪ್ರಶ್ನಿತ ಆದೇಶವು ರದ್ದತಿಗೆ ಯೋಗ್ಯವಾಗಿರುತ್ತದೆ. Karnataka Scheduled Castes and Scheduled Tribes (PTCL) Rules 1979 were to be followed before issuing notice to alienee. But in this case such rule has not been followed. The non following of such rules itself shows petitioners have not approached court with clean hands and they have exercised fraud on the authority by filing an incomplete petition which is violative of rules. The Karnataka Government circular dated 25-06-1983 vide Circular Number RD 31 LGP 83 With a Subject of Implementation of High Court Order dated 10-1-1983. In W.P.Nos. 10674, 10710, 14026, 16439. 18842, 22387, 23024 OF 1980, 3250, 17567 and 17568 of 1981 16663 and 17101 to 17103 of 1982 – Suggestions made by the Division Bench, regarding the smooth and proper implementation of the provisions of the Karnataka Scheduled Castes and Scheduled Tribes (PTCL) Act, 1978 – It has been brought to the notice of Government that a large number

of alieness that had received show cause notices from the Assistant commissioners of the areas or the orders made by them, challenged the validity of the Karnataka Scheduled Castes and Scheduled Tribes Act, 1978, the show cause notices or the orders there to made against them. The petitioners against whom final orders have been made by the respective Assistant Commissioners have challenged the Act and the orders made against them. It is also pointed out that in most of the cases the show cause notices issued to the alienees the Assistant Commissioners do not set out any of the details required by the Rules. Before issuing the show cause notices to the alienees, it is proper for the Assistant Commissioners to collect all such information as they can and clearly set out all the grounds on which the alienation is proposed to be annuled, so that the alienee can satisfactorily state his case also before the authority. The show cause notice must be a self-contained one, giving grounds for proceedings against the alienee the nature of violation of the provisions of Law and the purpose for which the notice is issued and to show cause why the sale transaction should not be held void. The notice should also contain pattadar, the conditions attached to it and the violations of the conditions in this sale, should be specifically mentioned so that a reasonable opportunity would have been given to the alienee to explain his position his position in clear terms………………..".

27. ಕರ್ನಾಟಕ ಸರ್ಕಾರ ಈ ಕೆಳಕಂಡ ಸುತ್ತೋಲೆಯಲ್ಲಿ ಜೆರಾಕ್ಸ್ ಪ್ರತಿಗಳನ್ನು ಪರಿಗಣಿಸಬೇಡಿ ಎಂದು ತಾಕೀತು ಮಾಡಿ ಅದಕ್ಕೆ ಸೂಕ್ತ ಕಾರಣವನ್ನು ನೀಡಿದೆ. ಈ ಪ್ರಶ್ನಿತ ಕೇಸಿನಲ್ಲಿ ಜೆರಾಕ್ಸ್ ಪ್ರತಿಯ ಅವಲಂಬನೆ ಯಾವ ಕಾನೂನಿನ ಅಡಿಯಲ್ಲಿ ಮಾಡಲಾಗಿದೆ, ಅದರ ಹಿಂದಿನ ಉದ್ದೇಶವೇನು ತಿಳಿಯದಾಗಿದೆ. Government of Karnataka vide its circular dated 31-05-1990 in Circular number: RD 97 LGP 90 have specifically directed not to accept photostat copies of documents presented by the private parties to take important decisions, without verifying the originals to satisfy as to the authenticity of the document. The circular says like this "It has come to the notice of Government, that the field level Officers coming under the control of Revenue Department, like Stamps and Registration Department, Survey Settlement and Land Records Department, Muzrai and wakf Department and other departments are accepting photostat copies of

